**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-560 027**

ಸಂ:ಕರಾಸಾ:ಕೇಕ:ಸಂ:ಸಿ2: 1772 :2019-20 ದಿನಾಂಕ: 02.12.2019

**ಸುತ್ತೋಲೆ ಸಂಖ್ಯೆ :1520/2019**

ವಿಷಯ : ಹಿರಿಯ ನಾಗರಿಕರ ಟಿಕೆಟ್ ರಿಯಾಯಿತಿ ವಿಸ್ತರಣೆಗೆ ಕುರಿತಂತೆ.

ಉಲ್ಲೇಖ : ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 780/2017 ದಿನಾಂಕ 07.2.2017.

****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, 60 ವರ್ಷ ಪೂರ್ಣಗೊಂಡಿರುವ ಹಾಗೂ ಅದಕ್ಕೂ ಹೆಚ್ಚಿನ ವಯಸ್ಸಿನ ಕರ್ನಾಟಕ ರಾಜ್ಯದ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ಶೇ.25 ರಿಯಾಯಿತಿ ನೀಡುವ ಸಂಬಂಧ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಮುಂದುವರೆದು, ಹಿರಿಯ ನಾಗರಿಕರ ಟಿಕೆಟ್ ಪ್ರಯಾಣ ದರದಲ್ಲಿ ಶೇ.25 ರಿಯಾಯಿತಿ ಪಡೆಯಲು ಪ್ರಯಾಣದ ಸಮಯದಲ್ಲಿ ಭೌತಿಕ ಗುರುತಿನ ಚೀಟಿಯನ್ನು ತೋರಿಸುವುದು ಕಡ್ಡಾಯವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರು ಡಿಜಿಟಲೀಕರಣದ ಕಾರಣದಿಂದ ಡಿಜಿಟಲ್ ಗುರುತಿನ ಚೀಟಿಗಳನ್ನು ಅನುಮತಿಸುವಂತೆ ಮನವಿ ಸಲ್ಲಿಸುತ್ತಿದ್ದು, ಹಿರಿಯ ನಾಗರೀಕರಿಗೆ ಅನುಕೂಲ ಕಲ್ಪಿಸಲು, ಟಿಕೆಟ್ ರಿಯಾಯಿತಿ ಪಡೆಯಲು ಫಲಾನುಭವಿಗಳು ಭೌತಿಕ ಗುರುತಿನ ಚೀಟಿಯ ಜೊತೆಗೆ ಪ್ರಯಾಣಿಕರು ಡಿಜಿಲಾಕರ್ ಆಪ್ (DigiLocker app) ಮುಖಾಂತರ ಹಾಜರುಪಡಿಸುವ ಆಧಾರ್, ಪಾನ್‌ಕಾರ್ಡ್ ಹಾಗೂ ಚಾಲನಾ ಪರವಾನಗಿ ಗುರುತಿನ ಚೀಟಿ (ಸಾಫ್ಟ್‌ಪ್ರತಿ)ಗಳನ್ನೂ ಸಹ ಪ್ರಯಾಣದ ಸಮಯದಲ್ಲಿ ಮಾನ್ಯ ಪುರಾವೆಯಾಗಿ ಸ್ವೀಕರಿಸಲು ಪರಿಗಣಿಸಿ, ಈ ಕೆಳಕಂಡ ನಿರ್ದೇಶನಗಳನ್ನು ಜಾರಿಗೊಳಿಸಲಾಗಿದೆ.

| ಗುರುತಿನ ಚೀಟಿಯ ಮಾದರಿ | ಮೂಲ / ಸಾಫ್ಟ್ ಪ್ರತಿ |
|---|---|
| ಚಾಲನಾ ಪರವಾನಗಿ, ಚುನಾವಣೆ ಗುರುತಿನ ಚೀಟಿ, ಪಾನ್ ಕಾರ್ಡ್, ಪಾಸ್‌ಪೋರ್ಟ್, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಹಿರಿಯ ನಾಗರಿಕರ ಗುರುತಿನ ಚೀಟಿ | • ಪ್ರಯಾಣಿಕರ ಫೋಟೋ ಸಹಿತ ಗುರುತಿನ ಚೀಟಿ ಮೂಲ ಪ್ರತಿ ಅಥವಾ<br>• ಡಿಜಿಲಾಕರ್ ಆಪ್ (DigiLocker app) ಮುಖಾಂತರ ಹಾಜರುಪಡಿಸುವ ಸಾಫ್ಟ್ ಪ್ರತಿ |
| ಸರ್ಕಾರಿ ಇಲಾಖೆಗಳಿಂದ ಫೋಟೋ ಸಮೇತ ವಿತರಿಸಿರುವ ಗುರುತಿನ ಚೀಟಿ | ಮೂಲ ಗುರುತಿನ ಚೀಟಿ |
| ನಿಗಮದ ವತಿಯಿಂದ ವಿತರಿಸಿರುವ ಗುರುತಿನ ಚೀಟಿ | ಮೂಲ ಗುರುತಿನ ಚೀಟಿ |

ಹಿರಿಯ ನಾಗರೀಕರ ಟಿಕೆಟ್ ರಿಯಾಯಿತಿ ಕರ್ನಾಟಕ ರಾಜ್ಯದ ವಾಸಿಗಳಿಗೆ ಮಾತ್ರ ಅನ್ವಯಿಸುತ್ತದೆ.

ಮೇಲ್ಕಂಡ ಸೂಚನೆಗಳ ಬಗ್ಗೆ ನಿಗಮದ ಎಲ್ಲಾ ಅಧಿಕಾರಿಗಳು / ಸಿಬ್ಬಂದಿ, ಮುಖ್ಯವಾಗಿ ಚಾಲನಾ ಸಿಬ್ಬಂದಿ ಹಾಗೂ ಬಸ್ಸು ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಹಾಗೂ ತನಿಖಾ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಲು ಕ್ರಮ ತೆಗೆದುಕೊಳ್ಳಲು ಆದೇಶಿಸಲಾಗಿದೆ.

ಮೇಲ್ಕಂಡ ಆದೇಶವು ಈ ಕೂಡಲೇ ಜಾರಿಗೆ ಬರುತ್ತದೆ. ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಅನುಸರಣಾ ವರದಿಯನ್ನು ನೀಡುವುದು.

(ಶಿವಯೋಗಿ ಸಿ ಕಳಸದ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು,
ಕರಾರಸಾ ನಿಗಮ.

**ಪ್ರತಿಯನ್ನು :**

1. ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ. ಸಂಸ್ಥೆ / ಈ.ಕ.ರ.ಸಾ. ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲ್ಬುರ್ಗಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು /ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲಬುರ್ಗಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5. ಹಿರಿಯ/ಆಪ್ತ ಕಾರ್ಯದರ್ಶಿಗಳು, ಅಧ್ಯಕ್ಷರು / ಉಪಾಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಸಿ&ಪ)/(ಭ&ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.